**ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ**

**ಸಿ.ಸಿ. ನಂ. 207/2018**

**ಪಿ.ಡಬ್ಲ್ಯೂಃ 1**

**ಸಾಕ್ಷಿಗೆ ದಿನಾಂಕಃ 05.03.2026 ರಂದು ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರೆದ ಪಾಟೀ ಸವಾಲು ಆರೋಪಿ ಪರ**

1. ನಿಪಿಃ 9 ರಿಂದ 12 ರಲ್ಲಿ ನಾನು ಜಮೀನಿನ ಮೇಲೆ ಸಾಲ ಪಡೆದ ಬಗ್ಗೆ ನಮೂದು ಇದೆ ಎಂದರೆ ಸರಿ. ಆರೋಪಿ ನನಗೆ ನಿರ್ಧಿಷ್ಟವಾಗಿ ಇಂತಹ ದಿನ ಚೆಕ್ಕನ್ನು ಬ್ಯಾಂಕ್ ಗೆ ಸಲ್ಲಿಸಿ ಎಂದು ನಿರ್ದೇಶನ ನೀಡಿದ್ದನು ಎಂದು ದೂರಿನಲ್ಲಿ ಹಾಗೂ ನೋಟಿಸ್ ನಲ್ಲಿ ಹೇಳಿಲ್ಲ. ಚೆಕ್ಕ್ ಅಮಾನ್ಯವಾದ ಕಾರಣ ಆರೋಪಿ ಹೇಳಿಕೆ ಮೇರೆಗೆ ಮತ್ತೊಮ್ಮೆ ಅದನ್ನು ಬ್ಯಾಂಕ್ ಹಾಜರುಪಡಿಸಿದ್ದೆನೆ ಎಂದು ನೋಟಿಸ್ ನಲ್ಲಿ ಹಾಗೂ ದೂರಿನಲ್ಲಿ ಹೇಳಿಲ್ಲ ಎಂದರೆ ಸರಿ. ಚೆಕ್ಕು ಅಮಾನ್ಯವಾದ ನಂತರ ಅದರ ಬಗ್ಗೆ ಆರೋಪಿಗೆ ತಿಳಿಸಿದ್ದೆನೆ ಎಂದು ನೋಟಿಸ್ ನಲ್ಲಿ ಹಾಗೂ ದೂರಿನಲ್ಲಿ ಹೇಳಿಲ್ಲ ಎಂದರೆ ಸರಿ. ಆದಾಯ ತೆರಿಗೆ ಹಾಜರುಪಡಿಸಿದರೆ ಆರೋಪಿಗೆ ನಾನು ಸಾಲ ಕೊಟ್ಟಿಲ್ಲ ಎಂಬ ಸತ್ಯ ಹೊರಬರುತ್ತದೆ ಎನ್ನುವ ಕಾರಣಕ್ಕೆ ನಾನು ಸದರಿ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಯ ತಾಯಿ ನಮ್ಮ ವಿರುದ್ದ ಮೌಖಿಕ ದೂರು ನೀಡಿದ್ದ ಕಾರಣ ನಾನು ಈ ಸುಳ್ಳು ಪ್ರಕರಣ ಸಲ್ಲಿಸಿದ್ದೆನೆ ಎಂದರೆ ಸರಿಯಲ್ಲ. ಆರೋಪಿಗೆ ಸಾಲ ಕೊಡುವಷ್ಟು ಹಣ ನನ್ನ ಬಳಿ ಇರಲಿಲ್ಲ ಎಂದರೆ ಸರಿಯಲ್ಲ. ಅಂಚೆ ಇಲಾಖೆಯೊಂದಿಗೆ ಶ್ಯಾಮಿಲಾಗಿ ಸುಳ್ಳು ಹಿಂಬರಹ ಪಡೆದಿದ್ದೆನೆ ಎಂದರೆ ಸರಿಯಲ್ಲ. ನನ್ನ ಹಾಗೂ ಆರೋಪಿ ನಡುವೆ ಹಣಕಾಸಿನ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನಿಂದ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ಚೆಕ್ಕನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**

**ನ್ಯಾಯಾಧೀಶರು, ಸಿರುಗುಪ್ಪ .**